

ಡಾ. ಎಸ್. ರಾಮಮೂರ್ತಿ

# 13-11-2014ರಿಂದ 19-11-2014ರವರೆಗೆ



**ಮೇಷ**

ವಾರದ ಆರಂಭದಲ್ಲಿ ಮಾನಸಿಕ ಕ್ಲೇಶ. ಮಕ್ಕಳೊಡನೆ ವಿವಾದ. ಪಾಲುದಾರಿಕೆಯಲ್ಲಿ ಹಿನ್ನಡೆ. ಅನಾವಶ್ಯಕ ತಿರುಗಾಟ. ವಾರದ ಮಧ್ಯ ಭಾಗದಿಂದ, ಮನಃ ಶಾಂತಿ. ಸ್ಥಿರ ಮನಸ್ಸು. ನಿರ್ಧಾರಗಳನ್ನು ತೆಗೆದುಕೊಳ್ಳಲು ಕುಟುಂಬ ಸದಸ್ಯರಿಂದ ಸಹಕಾರ. ಶುಭ ಕಾರ್ಯ ಯೋಜನೆ. ನಿರೀಕ್ಷೆಯಂತೆ ಕಾರ್ಯಸಿದ್ಧಿ. ವ್ಯಾಪಾರದಲ್ಲಿ ಲಾಭ. ಶುಭದಿನ: 18; ಗಣಪತಿ, ಶಿವ ಅಷ್ಟೋತ್ತರ ಪಠಿಸಿ



**ವೃಷಭ**

ವಾರದ ಆರಂಭದಲ್ಲಿ ಸೌಖ್ಯ. ಕುಟುಂಬದಲ್ಲಿ ಶಾಂತಿ. ಉದ್ಯೋಗದಲ್ಲಿ ಪ್ರಗತಿ. ಗುರು ಹಿರಿಯರಿಂದ ಸಲಹೆ. ಲೇವಾದೇವಿಗಳಲ್ಲಿ ಲಾಭ. ವಾರದ ಮಧ್ಯಭಾಗದಲ್ಲಿ ಸಣ್ಣ ಪುಟ್ಟ ಪೆಟ್ಟಾಗುವಿಕೆ. ಕಾರ್ಯ ಕಲಾಪಗಳಲ್ಲಿ ತಪ್ಪುಗಳಾಗುವುದು. ಅನಾರೋಗ್ಯ, ವ್ಯಾಪಾರದಲ್ಲಿ ಹಿನ್ನಡೆ. ಅಹಿತ ಭೋಜನ. ವಾರಾಂತ್ಯದಲ್ಲಿ ಸಮಾಧಾನ. ಶುಭದಿನ: 14; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ



**ಮಿಥುನ**

ವಾರದ ಮಧ್ಯಭಾಗದವರೆಗೂ ಸಂತೋಷ. ಅಪೇಕ್ಷೆಯಂತೆ ನಡೆಯುವ ಕಾರ್ಯಗಳು. ವ್ಯಾಪಾರದಲ್ಲಿ ಲಾಭ. ಪ್ರೀತಿ ಪಾತ್ರರ ಆಗಮನ. ವಾಹನ ಸೌಖ್ಯ. ನಿವೇಶನ ಖರೀದಿ. ತಕರಾರುಗಳಲ್ಲಿ ನ್ಯಾಯಪ್ರಾಪ್ತಿ. ಗಣ್ಯರಿಂದ ಹೊಗಳಿಕೆ. ವಾರಾಂತ್ಯದಲ್ಲಿ ಚಂಚಲತೆ. ಸೋದರ ವರ್ಗದವರ ಮೇಲೆ ಕೋಪ. ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ. ಶುಭದಿನ: 15; ಗಣಪತಿ, ಶಿವ ಅಷ್ಟೋತ್ತರ ಪಠಿಸಿ



**ಕಟಕ**

ಕಾರ್ಯ ಕಲಾಪಗಳು ಸಮಯಕ್ಕೆ ಸರಿಯಾಗಿ ಮುಗಿದು. ಆಟ ಪಾಠಗಳಲ್ಲಿ ಮುನ್ನಡೆ. ವ್ಯಾಪಾರ, ವೃತ್ತಿ, ಒಪ್ಪಂದ ವ್ಯವಹಾರಗಳಲ್ಲಿ ಲಾಭ. ಶತ್ರುಗಳು ತಟಸ್ಥರಾಗುವರು. ಹಿರಿಯರೊಂದಿಗೆ ಸಮಾಲೋಚನೆ. ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚುವುದು. ಹಣದ ವಿಚಾರದಲ್ಲಿ ಒತ್ತಡ ನಿವಾರಣೆಯಾಗುವುದು. ಶುಭದಿನ: 16; ದುರ್ಗಾ, ದತ್ತಾತ್ರೇಯ ಅಷ್ಟೋತ್ತರ ಪಠಿಸಿ



**ಸಿಂಹ**

ವಾರದ ಆರಂಭದಲ್ಲಿ ಬೇಸರ. ಕೆಲಸ ಕಾರ್ಯಗಳಲ್ಲಿ ಅಡಚಣೆ. ಕ್ರಯ ವಿಕ್ರಯಗಳಲ್ಲಿ ಹಾನಿ. ಆರೋಗ್ಯ ವ್ಯತ್ಯಯ. ವಾರದ ಮಧ್ಯ ಭಾಗದಿಂದ ಅನುಕೂಲ, ಅಭಿವೃದ್ಧಿ. ತಾಳ್ಮೆ ಹೆಚ್ಚುವುದು. ಉದ್ಯೋಗದಲ್ಲಿ ಪ್ರಗತಿ. ಹಿರಿಯರಿಂದ ಸಹಾಯ. ವ್ಯಾಪಾರ ವಹಿವಾಟುಗಳಲ್ಲಿ ಸೂಕ್ತ ಲಾಭ. ಹಿತ ವಾರ್ತೆ. ಆಪ್ತರ ಆಗಮನ. ಶುಭದಿನ: 18; ಗಣಪತಿ, ಗುರು ಅಷ್ಟೋತ್ತರ ಪಠಿಸಿ



**ಕನ್ಯಾ**

ವಾರದ ಆರಂಭದಲ್ಲಿ ಸೌಖ್ಯ. ಕೆಲಸ ಕಾರ್ಯಗಳಲ್ಲಿ ನಿರೀಕ್ಷಿತ ಫಲ. ವಿವಾದಗಳಲ್ಲಿ ಗೆಲುವು. ಪ್ರಯಾಣದಲ್ಲಿ ನಿರಾತಂಕ. ಅಧ್ಯಯನದಲ್ಲಿ ಮುನ್ನಡೆ. ವಾರದ ಮಧ್ಯಭಾಗದಲ್ಲಿ ಆತಂಕ. ಅನಾವಶ್ಯಕ ಖರ್ಚು. ಉದ್ಯೋಗದಲ್ಲಿ ಒತ್ತಡ. ವಾಹನಗಳಿಂದ ತೊಂದರೆ. ವಾರಾಂತ್ಯದಲ್ಲಿ ಸಮಾಧಾನ, ಆತ್ಮಬಲ ವೃದ್ಧಿ. ಶುಭದಿನ: 14; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ



**ತುಲಾ**

ವಾರದ ಮಧ್ಯಭಾಗದವರೆಗೂ ಅನುಕೂಲ. ಪ್ರೀತಿ ಪಾತ್ರರ ಭೇಟಿ. ಗೃಹ ನವೀಕರಣ ಯೋಜನೆ. ವ್ಯಾಪಾರದಲ್ಲಿ ತಕ್ಕ ಲಾಭ. ವಿದೇಶಿ ವ್ಯವಹಾರಗಳಲ್ಲಿ ಆಸಕ್ತಿ. ಪ್ರಯಾಣ ಸೌಖ್ಯ. ಹಿತಕರ ವಾರ್ತೆ. ಕುಟುಂಬ ಸದಸ್ಯರಲ್ಲಿ ಏಕಾಭಿಪ್ರಾಯ. ವಾರಾಂತ್ಯದಲ್ಲಿ ಆಲಸ್ಯ. ಅಧಿಕ ಖರ್ಚು. ವಿಳಂಬ ಸಂದೇಶಗಳು. ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ. ಶುಭದಿನ: 15; ಶಿವ, ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ



**ವೃಶ್ಚಿಕ**

ವಾರದ ಆರಂಭದಲ್ಲಿ ಅಶಾಂತಿ. ಸೋದರ ವರ್ಗದವರೊಂದಿಗೆ ಕಲಹ ಸಾಧ್ಯತೆ. ಬಂಧುಗಳಿಂದ ಅಸಹಕಾರ. ವೃತ್ತಿಯಲ್ಲಿ ಹಿನ್ನಡೆ. ವಾರದ ಮಧ್ಯಭಾಗದಿಂದ ಮುನ್ನಡೆ. ಕೋಪ ಕಡಿಮೆಯಾಗುವುದು. ಕೆಲಸ ಕಾರ್ಯಗಳು ಸಫಲವಾಗುವುವು. ವ್ಯಾಪಾರ ರಂಗದಲ್ಲಿ ನಿರೀಕ್ಷಿತ ಫಲ. ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ. ಶುಭದಿನ: 17; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ



**ಧನಸ್ಸು**

ವಾರದ ಆರಂಭದಲ್ಲಿ ಏನಾದರೊಂದು ಚಿಂತೆ. ಉದ್ಯೋಗದಲ್ಲಿ ತಪ್ಪುಗಳಾಗುವುದು. ಮಕ್ಕಳು ಒತ್ತಡವುಂಟು ಮಾಡುವರು. ಹಣದ ವಿಚಾರದಲ್ಲಿ ಕಲಹ ಸಾಧ್ಯತೆ. ವಾರದ ಮಧ್ಯಭಾಗದಿಂದ ಸ್ಥಿರ ಮನಸ್ಸು. ವ್ಯಾಪಾರದಲ್ಲಿ ಸೂಕ್ತ ಲಾಭ. ಹಿರಿಯರೊಡನೆ ಚರ್ಚೆ. ನೂತನ ವಾಹನ ಖರೀದಿ ಯತ್ನ. ಸಂತಸದ ಸಂದೇಶ. ಶುಭದಿನ: 17; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ



**ಮಕರ**

ವಾರದ ಆರಂಭದಲ್ಲಿ ಸಂತಸ. ಪ್ರೀತಿ ಪಾತ್ರರ ಭೇಟಿ. ಶ್ರಮವಿಲ್ಲದೆ ಕಾರ್ಯ ಸಾಧನೆ. ಒಪ್ಪಂದ ವ್ಯವಹಾರಗಳಲ್ಲಿ ಲಾಭ. ಮಿತ್ರರಿಗೆ ಸಲಹೆ ಕೊಡುವಿಕೆ. ವಾರದ ಮಧ್ಯಭಾಗದಲ್ಲಿ ಮನೋಬಲ ಕುಗ್ಗುವುದು. ಕೋಪ ತಾಪದ ಮಾತುಗಳು. ಆರೋಗ್ಯ ವ್ಯತ್ಯಯ. ವ್ಯಾಪಾರದಲ್ಲಿ ಹಿನ್ನಡೆ. ವಿರೋಧಿಗಳಿಂದ ಉಪದ್ರವ. ಶುಭದಿನ: 14; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ



**ಕುಂಭ**

ವಾರದ ಮಧ್ಯಭಾಗದವರೆಗೂ ಅನುಕೂಲ, ಮನಃ ಶಾಂತಿ. ಹಣದ ಸಮಸ್ಯೆ ಬಗೆ ಹರಿಯುವುದು. ಆಟ ಪಾಠಗಳಲ್ಲಿ ಮುನ್ನಡೆ. ಉದ್ಯೋಗದಲ್ಲಿ ಪ್ರಗತಿ. ಲೇವಾದೇವಿಗಳಲ್ಲಿ ಲಾಭ. ಹಿತಕರ ಘಟನೆಗಳು. ದೇವತಾ ಕ್ಷೇತ್ರದರ್ಶನ. ವಾರಾಂತ್ಯದಲ್ಲಿ ಅಧಿಕ ಶ್ರಮ. ಕಾರ್ಯ ಪ್ರವೃತ್ತರಾಗಲು ನಿರಾಸಕ್ತಿ. ವ್ಯಾಪಾರ ವಹಿವಾಟುಗಳಲ್ಲಿ ಹಿನ್ನಡೆ. ಶುಭದಿನ: 15; ಗಣಪತಿ, ಶಿವ ಅಷ್ಟೋತ್ತರ ಪಠಿಸಿ



**ಮೀನ**

ವಾರದ ಆರಂಭದಲ್ಲಿ ಚಂಚಲತೆ. ಹಿರಿಯರ ಮೇಲೆ ಸಿಟ್ಟು. ಕೆಲಸ ಕಾರ್ಯಗಳಲ್ಲಿ ಅಡಚಣೆ. ಲೇವಾದೇವಿಗಳಲ್ಲಿ ಹಿನ್ನಡೆ. ಅಕಾಲ ಭೋಜನ. ವಾರದ ಮಧ್ಯಭಾಗದಿಂದ ಚೇತರಿಕೆ. ದೃಢ ಮನಸ್ಸು. ಉದ್ಯೋಗದಲ್ಲಿ ಪ್ರಗತಿ. ಕುಟುಂಬ ಸದಸ್ಯರಲ್ಲಿ ಒಮ್ಮತ. ವ್ಯಾಪಾರ ವೃತ್ತಿಗಳಲ್ಲಿ ಲಾಭ. ವಾಹನ ಸೌಖ್ಯ. ಆರೋಗ್ಯ ಸುಧಾರಣೆ. ಹಿತ ಸುದ್ದಿ. ಶುಭದಿನ: 17; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ